**All India Radio: Bangalore**
**National Bulletins In Kannada**
**16.08.2025 / 7.35 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**16.08.2025 / 7.35 pm**

**<><*<><>*><>**

ಮುಖ್ಯಾಂಶಗಳು

೧. ಅಲಸ್ಕಾದಲ್ಲಿ ಅಮೆರಿಕಾ - ರಷ್ಯಾ ಅಧ್ಯಕ್ಷರ ಶೃಂಗಸಭೆ; ಭಾರತದ ಸ್ವಾಗತ ಮಾತುಕತೆ, ರಾಜತಾಂತ್ರಿಕ ಮಾರ್ಗವೇ ಮುಂದಿನ ಹಾದಿ

೨. ಪ್ರಧಾನ ಮಂತ್ರಿ ಅವರಿಂದ ನಾಳೆ ನವದೆಹಲಿಯಲ್ಲಿ ೧೧ ಸಾವಿರ ಕೋಟಿ ರೂಪಾಯಿ ಮೊತ್ತದ ಎರಡು ಪ್ರಮುಖ ರಾಷ್ಟ್ರೀಯ ಹೆದ್ದಾರಿ ಲೋಕಾರ್ಪಣೆ

೩. ಭೂಮಿಗೆ ಹಿಂತಿರುಗಿರುವ ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅಮೇರಿಕಾದಿಂದ ನಾಳೆ ಭಾರತಕ್ಕೆ ವಾಪಾಸಾಗುವ ನಿರೀಕ್ಷೆ

೪. ಚೀನಾ ವಿದೇಶಾಂಗ ಸಚಿವ ವಾಂಗ್ ಯಿ, ಸೋಮವಾರದಿಂದ ಭಾರತಕ್ಕೆ ಎರಡು ದಿನಗಳ ಭೇಟಿ

೫. ಭಾರತದ ಸಷ್ ಆಟಗಾರ್ತಿ ಅನಾಹತ್ ಸಿಂಗ್ ಬೆಗಾ ಓಪನ್ ಪಂದ್ಯಾವಳಿಯ ಫೈನಲ್ಸ್‌ಗೆ

><><><><><><

ಅಲಸ್ಕಾದಲ್ಲಿ ಅಮೇರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಡೆಸಿದ ಶೃಂಗಸಭೆಯನ್ನು ಭಾರತ ಸ್ವಾಗತಿಸಿದೆ. ಶಾಂತಿಗಾಗಿ ಈ ನಾಯಕರು ನಡೆಸಿದ ಸಭೆ ಅತ್ಯಂತ ಶ್ಲಾಘನೀಯ ಎಂದು ಭಾರತ ತಿಳಿಸಿದೆ. ಮಾತುಕತೆಯಲ್ಲಿ ಮಾಡಲಾದ ಪ್ರಗತಿ ಪ್ರಶಂಸಿಸಿರುವ ಭಾರತ ಮಾತುಕತೆ ರಾಜತಾಂತ್ರಿಕ ಮಾರ್ಗವೇ ಮುಂದಿನ ಹಾದಿಯಾಗಿದೆ ಎಂದು ಪುರುಚ್ಚರಿಸಿದೆ. ಉಕ್ರೇನ್ ಸಂಘರ್ಷ ಶೀಘ್ರದಲ್ಲಿ ಕೊನೆಗೊಳ್ಳುವುದನ್ನೇ ವಿಶ್ವ ಎದುರು ನೋಡುತ್ತಿದೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ರಷ್ಯಾದ ಶಕ್ತಿಯನ್ನು ಗಮನದಲ್ಲಿಟ್ಟು ಉಕ್ರೇನ್ ಯುದ್ಧ ಸಮಾಪ್ತಿ ಪರಿಶೀಲಿಸುವಂತೆ ಅಮೆರಿಕ ಅಧ್ಯಕ್ಷ

ಡೋನಾಲ್ಡ್ ಟ್ರಂಪ್ ಇಂದು ಸೂಚಿಸಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಸುಮಾರು ೩ ತಾಸುಗಳ ಕಾಲ ಸಭೆ ನಡೆಸಿದ ಬಳಿಕ ಅಮೆರಿಕಾ ಅಧ್ಯಕ್ಷರು ಈ ಸೂಚನೆ ನೀಡಿದ್ದಾರೆ. ಮಾತುಕತೆ ಹಾಗೂ ಚರ್ಚೆಗಳು ಶಾಂತಿಗೆ ದಾರಿ ಮಾಡಿಕೊಡುತ್ತವೆ ಎಂಬ ಆಶಯವನ್ನು ಪುಟಿನ್ ವ್ಯಕ್ತಪಡಿಸಿದ್ದಾರೆ. ಉಕ್ರೇನ್ ನ ಅಧ್ಯಕ್ಷ ವ್ಲಾಡಿಮಿರ್ ಜೆಲೆಂಸ್ಕಿ ಸೋಮವಾರ ವಾಷಿಂಗ್‌ಟನ್ ನಲ್ಲಿ ಅಮೆರಿಕಾ ಅಧ್ಯಕ್ಷ ಟ್ರಂಪ್ ಅವರನ್ನು ಭೇಟಿ ಮಾಡುವುದಾಗಿ ತಿಳಿಸಿದ್ದಾರೆ.

><><><><><

ಪ್ರಧಾನಿ ನರೇಂದ್ರ ಮೋದಿ ನಾಳೆ ನವದೆಹಲಿಯಲ್ಲಿ ಸುಮಾರು ೧೧ ಸಾವಿರ ಕೋಟಿ ರೂಪಾಯಿ ಮೊತ್ತದ ಎರಡು ಪ್ರಮುಖ ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ. ದೆಹಲಿ ವಲಯದ ದ್ವಾರಕಾ ಎಕ್ಸ್ ಪ್ರೆಸ್ ವೇ ಮತ್ತು  ನಗರ ವಿಸ್ತೃತ ಪಥ -ಎರಡು, ಇವುಗಳಲ್ಲಿ ಸೇರಿವೆ. ದೆಹಲಿ ನಗರದ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸಿ, ಸಂಚಾರದ ವೇಳೆ ತಗ್ಗಿಸಿ, ಉತ್ತಮ ಸಂಪರ್ಕ ಕಲ್ಪಿಸುವ ಸಮಗ್ರ ಯೋಜನೆಯಡಿ ಈ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ಎಂದು ಪ್ರಧಾನ ಮಂತ್ರಿಗಳ ಕಾರ್ಯಾಲಯ ತಿಳಿಸಿದೆ. ಪ್ರಧಾನ ಮಂತ್ರಿ ಈ ಸಂದರ್ಭದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ

><><><><><

ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ೧೮ ದಿನಗಳ ಯಶಸ್ವಿ ಪ್ರಯೋಗ ನಡೆಸಿ ಭೂಮಿಗೆ ಹಿಂತಿರುಗಿರುವ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅಮೇರಿಕಾದಿಂದ ನಾಳೆ ಭಾರತಕ್ಕೆ ವಾಪಾಸಾಗುವ ನಿರೀಕ್ಷೆ ಇದೆ. ಬಾಹ್ಯಾಕಾಶ ನಿಲ್ದಾಣದಿಂದ ಭೂಮಿಗೆ ಹಿಂತಿರುಗಿದ ಬಳಿಕ ಶುಭಾಂಶು ಶುಕ್ಲಾ ಅಮೇರಿಕಾದಲ್ಲಿ ಪುನರ್ವಸತಿ ಆರೈಕೆಗಳನ್ನು ಪಡೆಯುತ್ತಿದ್ದರು. ತಮ್ಮ ಯಾತ್ರೆ ಪೂರೈಸಿ ತಾಯ್ನಾಡಿಗೆ ಮರಳಿ ಸ್ನೇಹಿತರು ಹಾಗೂ ಕುಟುಂಬವನ್ನು ಸೇರಿಕೊಳ್ಳುತ್ತಿರುವ ಬಗ್ಗೆ ಶುಭಾಂಶು ಶುಕ್ಲಾ ಇನ್ಸ್ಟಾಗ್ರಾಮ್ ನಲ್ಲಿ  ಭಾವನಾತ್ಮಕ ಉತ್ಸಾಹವನ್ನು ಹಂಚಿಕೊಂಡಿದ್ದಾರೆ.. ಭಾರತೀಯ ವಾಯುಪಡೆಯ ಅಧಿಕಾರಿಯಾದ ಶುಭಾಂಶು ಶುಕ್ಲಾ ಎಕ್ಸಿಂ-೪ ಮಿಷನ್‌ನ್ನಿನ ಗಗನಯಾತ್ರಿಯಾಗಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಕಿರು ಗುರುತ್ವಾಕರ್ಷಣೆಗೆ ಸಂಬಂಧಿಸಿದಂತೆ ವಿವಿಧ ಪ್ರಯೋಗಗಳನ್ನು ನಡೆಸಿದ್ದಾರೆ. ಮುಂದಿನ ವರ್ಷದ ಅಂತ್ಯದ ವೇಳೆಗೆ

ನಿಗದಿಯಾಗಿರುವ ಭಾರತದ ಮೊದಲ  ಮಾನವ ಸಹಿತ ಬಾಹ್ಯಾಕಾಶ ಯಾನಕ್ಕಾಗಿ ಪಟ್ಟಿಯಲ್ಲಿರುವ ಗಗನಯಾತ್ರಿಗಳಲ್ಲಿ ಶುಭಾಂಶು ಶುಕ್ಲಾ ಒಬ್ಬರಾಗಿದ್ದಾರೆ.

><><><><><

ರಾಷ್ಟ್ರಪತಿ ದ್ರೌಪದಿ ಮುರ್ಮು ರಾಷ್ಟ್ರಪತಿ ಉದ್ಯಾನದಲ್ಲಿ ಇಂದು ದೇವಕಣಗಿಲೆ, ಆಲದ ಮರ ತೋಪು ಹಾಗೂ ಕಲರವದ ತೊರೆಗಳನ್ನು ಉದ್ಘಾಟಿಸಿದರು. ಈ ತೋಪು ತೊರೆಗಳು ರಾಷ್ಟ್ರಪತಿ ಉದ್ಯಾನದ ಹೊಸ ಆಕರ್ಷಣೆಗಳಾಗಲಿವೆ ಎಂದು ರಾಷ್ಟ್ರಪತಿ ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ದೇವಕಣಗಿಲೆ ಸಂಸ್ಕರಿತ ಸಸ್ಯಗಳಾಗಿದ್ದು, ಆಲದ ಮರದ ತೋಪು ಪಂಚ ತತ್ವದ ಸ್ಫೂರ್ತಿಯನ್ನು ಸಾರುತ್ತವೆ. ಕಲರವದ ತೊರೆ, ಜಲಪಾತ ಮತ್ತು ಆಕರ್ಷಕ ಶೀಲೆಗಳನ್ನು ಒಳಗೊಂಡಿದೆ. ಅಮೃತ ಉದ್ಯಾನ ಮುಂದಿನ ತಿಂಗಳ ೧೪ರವರೆಗೆ ಸಾರ್ವಜನಿಕರಿಗಾಗಿ ತೆರೆದಿರುತ್ತದೆ.

><><><><><

ಚೀನಾದ ವಿದೇಶಾಂಗ ಸಚಿವ ಹಾಗೂ ಕಮ್ಯೂನಿಸ್ಟ್ ಪಾರ್ಟಿ ಆಫ್ ಚೀನಾ ಪಾಲಿಟ್ ಬ್ಯುರೋ ಸದಸ್ಯ ವಾಂಗ್ ಯಿ, ಎರಡು ದಿನಗಳ ಭಾರತ ಭೇಟಿಗಾಗಿ ಸೋಮವಾರ ಆಗಮಿಸಲಿದ್ದಾರೆ. ರಾಷ್ಟ್ರೀಯ ಭದ್ರತೆ ಸಲಹೆಗಾರ ಅಜಿತ್ ದೋವಲ್ ಆಹ್ವಾನದ ಮೇರೆಗೆ ವಾಂಗ್ ಯಿ, ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ.  ಭಾರತ-ಚೀನಾ ಗಡಿ ಪ್ರಶ್ನೆ ಕುರಿತಾದ ವಿಶೇಷ ಪ್ರತಿನಿಧಿಗಳ ೨೪ ನೇ ಸುತ್ತಿನ ಮಾತುಕತೆಯಲ್ಲಿ ಭಾರತದ ವಿಶೇಷ ಪ್ರತಿನಿಧಿಯೂ  ಆದ ಅಜಿತ್ ದೋವಲ್ ಅವರೊಂದಿಗೆ ವಿಚಾರ ವಿನಿಮಯ ನಡೆಸಲಿದ್ದಾರೆ. ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಡಾ. ಎಸ್. ಜೈ ಶಂಕರ್  ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ, ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

><><><><><

ಹಿರಿಯ ಕಾಂಗ್ರೆಸ್ ಧುರೀಣ ಲೋಕಸಭೆಯಲ್ಲಿನ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಬಿಹಾರದ ಸಾಸಾರಾಮ್ ನಿಂದ ನಾಳೆ ಮತಹಕ್ಕು ಯಾತ್ರೆ ಆರಂಭಿಸಲಿದ್ದಾರೆ. ಮುಂದಿನ ೧೬ ದಿನಗಳ ಕಾಲ ನಡೆಯುವ ಈ ಯಾತ್ರೆ ಬಿಹಾರz ೨೫ ಜಿಲ್ಲೆಗಳಲ್ಲಿ ಸಂಚರಿಸಲಿದೆ.  ಬಿಹಾರ್ ಪ್ರದೇಶ

ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ಅಖಿಲೇಶ್ ಪ್ರಸಾದ್ ಸಿಂಗ್ ಪಾಟ್ನಾದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ ಈ ಯಾತ್ರೆ ೧ ಸಾವಿರದ ೩೦೦ ಕಿಲೋ ಮೀಟರ್ ದೂರವನ್ನು ಕ್ರಮಿಸಲಿದೆ. ಇಂಡಿಯಾ ಮೈತ್ರಿಕೂಟದ ನಾಯಕರು ಸೇರಿದಂತೆ ರಾಷ್ಟ್ರೀಯ ಜನತಾದಳ ನಾಯಕರು ತೇಜಸ್ವಿ ಪ್ರಸಾದ್ ಯಾದವ್ ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಮತಪಟ್ಟಿಗೆ ಸಂಬಂಧಿಸಿದಂತೆ ಮಾರ್ಚ್ ನಲ್ಲಿ ನಡೆಸಲಾದ ವಿಶೇಷ ತೀವ್ರ ಪರಿಷ್ಕರಣೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಆರೋಪದ ಬಗ್ಗೆ ಈ ಯಾತ್ರೆಯಲ್ಲಿ ವಿವರಿಸುವುದಾಗಿ ಅಖಿಲೇಶ್ ಪ್ರಸಾದ್ ಸಿಂಗ್ ತಿಳಿಸಿದ್ದಾರೆ.

><><><><><

ವಿದೇಶಾಂಗ ವ್ಯವಹಾರ ಖಾತೆಸಚಿವ ಡಾ.ಎಸ್.ಜೈಶಂಕರ್ ನವದೆಹಲಿಯಲ್ಲಿಂದು ದಕ್ಷಿಣ ಕೋರಿಯಾದ ವಿದೇಶಾಂಗ ಸಚಿವ ಚೋ ಹುನ್ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ವ್ಯಾಪಾರ ಸಾಗರೋತ್ತರ ವಹಿವಾಟು ಸರಕು ತಯಾರಿಕೆ ಕುರಿತಂತೆ ಫಲಪ್ರದ ಮಾತುಕತೆ ನಡೆಸಿದ್ದಾಗಿ ಡಾ.ಜೈ ಶಂಕರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಕೃತಕ ಬುದ್ಧಿಮತ್ತೆ ಸೆಮಿಕಂಡಕ್ಟರ್, ಸ್ವಚ್ಚ ಇಂಧನ, ರಕ್ಷಣಾ ವಲಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಹೊಸ ಅವಕಾಶಗಳ ಬಗ್ಗ ಚರ್ಚೆ ನಡೆಸಲಾಯಿತು ಇಂಡೋ ಫೆಸಿಫಿಕ್ ವಲಯ ಹಾಗೂ ಪ್ರಸ್ತುತ ಜಾಗತಿಕ ವಿದ್ಯಮಾನಗಳ ಬಗ್ಗೆ ವಿಚಾಋ ವಿನಿಮಯ ಎಂದು ಡಾ. ಜೈ ಶಂಕರ್ ತಿಳಿಸಿದ್ದಾರೆ.

><><><><><

ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ನೇಪಾಳಕ್ಕೆ ನಾಳೆಯಿಂದ ಎರಡು ದಿನಗಳ ಕಾಲ ಭೇಟಿ ನೀಡಲಿದ್ದಾರೆ ನೇಪಾಳದ ವಿದೇಶಾಂಗ ಕಾರ್ಯದರ್ಶಿ ಅಮೃತ್ ಬಹದೂರ್ ರೈ ಅವರ ಆಹ್ವಾನದ ಮೇರೆಗೆ ವಿಕ್ರಮ್ ಮಿಸ್ರಿ ನೇಪಾಳಕ್ಕೆ ಭೇಟಿ ನೀಡುತ್ತಿದ್ದಾರೆ. ನೇಪಾಳದ ಪ್ರಧಾನ ಮಂತ್ರಿ ಕೆ.ಪಿ.ಶರ್ಮಾ ಒಲಿ ಮುಂದಿನ ತಿಂಗಳು ಭಾರತ ಪ್ರವಾಸ ಕೈಗೊಳ್ಳುವ ನಿರೀಕ್ಷೆ ಇರುವ ಹಿನ್ನೆಲೆಯಲ್ಲಿ ಮಿಸ್ರಿ ಈ ಬೇಟಿ ನೀಡುತ್ತಿದ್ದಾರೆ. ಭಾರತ- ನೇಪಾಳ, ಇತ್ತೀಚಿನ ವರ್ಷಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಬಲವಾದ ಸ್ನೇಹಪರ ಸಹಕಾರ ಹೊಂದಿವೆ. ನೆರೆ ಮೊದಲು ನೀತಿಯಡಿ ಭಾರತ ನೇಪಾಳದ ಜೊತೆಗಿನ ಸಂಬಂಧಕ್ಕೆ ಆದ್ಯತೆ ನೀಡುತ್ತಿದೆ ಕಾರ್ಯದರ್ಶಿ ಭೇಟಿ ದ್ವಿಪಕ್ಷೀಯ

ಸಂಬಂಧಗಳನ್ನು ಬಲಪಡಿಸಲು ಸದಾವಕಾಶ ಒದಗಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ

><><><><><

ದೇಶದ ಕೊಂಕಣ ಹಾಗೂ ಗೋವಾ ಪ್ರದೇಶದ ವಿವಿಧ ಸ್ಥಳಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಅತೀ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಮುಂಬೈ, ಕೊಂಕಣ, ಗೋವಾ, ದಕ್ಷಿಣ ಮಹಾರಾಷ್ಟ್ರ ಹಾಗೂ ಅದಕ್ಕೆ ಹೊಂದಿದಂತೆ ಗುಜರಾತ್ ಪ್ರದೇಶಗಳಲ್ಲಿ ಭಾರಿ ಮಳೆಯ ರೆಡ್ ಅಲರ್ಟ ನೀಡಲಾಗಿದೆ ಎಂದು ಹವಾಮಾನ ಇಲಾಖೆ ಹಿರಿಯ ವಿಜ್ಞಾನಿ ಡಾ. ಆರ್ .ಕೆ ಜೇನಮಣಿ ತಿಳಿಸಿದ್ದಾರೆ

ಧ್ವನಿ: ಡಾ. ಆರ್ .ಕೆ ಜೇನಮಣಿ

ಒಡಿಶಾ, ಛತ್ತೀಸ್‌ಗಡ್, ಮತ್ತು ಆಂಧ್ರಪ್ರದೇಶದಲ್ಲಿಯೂ ಭಾರಿ ಮಳೆ ಬೀಳುವ ನಿರೀಕ್ಷೆ ಇದೆ.

><><><><><

ಆಸ್ಟ್ರೇಲಿಯಾದ ಹಿರಿಯ ಕ್ರಿಕೆಟ್ ಆಟಗಾರ ಮತ್ತು ತರಬೇತುದಾರ ಬಾಬ್ ಸಿಂಪ್ಸನ್ ಸಿಡ್ನಿಯಲ್ಲಿಂದು ನಿಧರಾದರು . ಅವರಿಗೆ ೮೯ ವರ್ಷ ವಯಸ್ಸಾಗಿತ್ತು. ಸಿಂಪ್ಸನ್ ಆಸ್ಟ್ರೇಲಿಯ ಪರವಾಗಿ ೬೨ ಟೆಸ್ಟ್ ಕ್ರಿಕೆಟ್ ಪಂದ್ಯವಾಡಿದ್ದರು. ವಿಶ್ವಕಪ್ ಪಂದ್ಯಗಳಲ್ಲಿಯೂ ಆಟವಾಡಿದ್ದರು.

><><><><><

ಭಾರತದ ಸಷ್ ಆಟಗಾರ್ತಿ ಅನಾಹತ್ ಸಿಂಗ್ ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಎನ್ ಎಸ್. ಡಬ್ಲ್ಯೂ ಬೆಗಾ ಓಪನ್ ೨೦೨೫ರ ಸಶ್ ಪಂದ್ಯಾವಳಿಯ ಫೈನಲ್ಸ್ ಪ್ರವೇಶಿಸಿದ್ದಾರೆ. ೧೭ ವರ್ಷದ ಅನಾಹತ್ ಸೆಮಿ ಫೈನಲ್ಸ್ ನಲ್ಲಿ ಈಜಿಪ್ಟ್ ನ ನೌರ್ ಕಫಾಗಿ ವಿರುದ್ಧ ೫೪ ನಿಮಿಷಗಳ ಕಾಲ ಸೆಣಸಿ ೩-೨ ಅಂತರದಲ್ಲಿ ಜಯ ದಾಖಲಿಸಿದರು. ಪಂದ್ಯದ ಸಂದರ್ಭದಲ್ಲಿ ಗಾಯಗೊಂಡಿದ್ದರೂ ಕೂಡ ಅನಾಹತ್ ದಿಟ್ಟ ಹೋರಾಟ ನೀಡಿ ಕಫಾಗಿ ಅವರನ್ನು ಪರಾಭವಗೊಳಿಸಿದರು. ಅನಾಹತ್ ಫೈನಲ್ಸ್ ನಲ್ಲಿ ಈಜಿಪ್ಟ್‌ನ ಹಬೀಬಾ ಹನಿ ಅವರನ್ನು ಎದುರಿಸಲಿದ್ದಾರೆ. ಎನ್ ಎಸ್. ಡಬ್ಲ್ಯೂ ಬೆಗಾ ಓಪನ್

೧೫ ಸಾವಿರ ಅಮೇರಿಕನ್ ಡಾಲರ್ ಬಹುಮಾನ ಮೊತ್ತದ ಪಂದ್ಯಾವಳಿಯಾಗಿದ್ದು, ೧೫-೧೬ನೇ ಸಾಲಿನ ಪ್ರವಾಸಿ ಹಂಗಾಮಿನ ವಿಶ್ವ ಮಟ್ಟದ ಸ್ಪರ್ಧೆಯಾಗಿದೆ.

><><><><><